ದಿಃ 15-11-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

ಪಾಟೀ ಸವಾಲು ಶ್ರೀ. ಸಿ.ಐ.ಎಸ್ **1,2** ಮತ್ತು **4** ನೇ ಪ್ರತಿವಾದಿಗಳ ಪರ ವಕೀಲರಿಂದಃ

ನಾನು 10 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನನ್ನ ತಂದೆಯ ಹೆಸರು ಸುಬ್ಬರಾಯಪ್ಪ. ಸದರಿ ಸುಬ್ಬರಾಯಪ್ಪನಿಗೆ ಒಬ್ಬ ತಮ್ಮನಿದ್ದನು. ಸುಬ್ಬರಾಯಪ್ಪನ ತಮ್ಮನ ಹೆಸರು ಸಂಕಪ್ಪ. ಸುಬ್ಬರಾಯಪ್ಪನಿಗೆ 3 ಜನ ಮಕ್ಕಳು. ಸದರಿ 3 ಜನ ಮಕ್ಕಳ ಪೈಕಿ ಒಬ್ಬಳು ಸುಬ್ಬರಾಯಪ್ಪನ ಮಗಳು. ನನ್ನ ತಂದೆಯವರು 2019 ರಲ್ಲಿ ತೀರಿಕೊಂಡರು. ನನ್ನ ತಂದೆಯ ತಂದೆ ಎಂದರೆ ನನ್ನ ತಾತನ ಹೆಸರು ಎಡೆಚೌಡಪ್ಪ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ತಿಳಿಸಿರುವ ತಿಮ್ಮಯ್ಯ ಎಂಬುವವರನ್ನು ನಾನು ನೋಡಿರುವುದಿಲ್ಲ. ಸದರಿ ತಿಮ್ಮಯ್ಯನ ಹೆಂಡತಿಯನ್ನು ನಾನು ನೋಡಿರುವುದಿಲ್ಲ. ಸದರಿ ತಿಮ್ಮಯ್ಯನ ಹೆಂಡತಿಯ ಹೆಸರು ನನಗೆ ಗೊತ್ತಿಲ್ಲ. ತಿಮ್ಮಯ್ಯನ ಹೆಂಡತಿಯವರು ಯಾವಾಗ ತೀರಿಕೊಂಡರು ಎಂಬುದು ನನಗೆ ಗೊತ್ತಿಲ್ಲ. ತಿಮ್ಮಯ್ಯನ ಮಗ ಅನಂತರಾಜು ಎಂಬುವವರನ್ನು ನಾನು ನೋಡಿದ್ದೇನೆ. ಸದರಿ ಅನಂತರಾಜುರವರನ್ನು ಸುಮಾರು 15 ವರ್ಷಗಳ ಹಿಂದೆ ನಾನು ನೋಡಿದೆನು.

ನಿಪಿ-1 ರ ಕ್ರಯ ಪತ್ರವನ್ನು ನಾನು ನೋಡಿದ್ದೇನೆ. ನಿಪಿ-1 ರ ಅಸಲಿ ಪ್ರತಿಯು ಎಲ್ಲಿದೆ ಎಂಬ ಪ್ರಶ್ನೆಗೆ ಸಾಕ್ಷಿ ಒಂದು ಬಾರಿ ಮನೆ ಬಿದ್ದುಹೋಯಿತು ಆಗ ಸದರಿ ದಾಖಲೆಯು ಏನಾಯಿತು ಎಂಬುದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಿಪಿ-1 ರ ಅಸಲಿ ಪ್ರತಿಯನ್ನು ನಾನು ನೋಡಿರುವುದಿಲ್ಲ. ನನ್ನ ಅಣ್ಣನ ಹೆಸರು ಗಂಗಾಧರ. ನನ್ನ ಅಣ್ಣನಾದ 2 ನೇ ವಾದಿಗೆ ಹೆಂಡತಿ ಮತ್ತು ಮಕ್ಕಳಿದ್ದಾರೆ. 2 ನೇ ವಾದಿ ತೀರಿಕೊಂಡು ಸುಮಾರು 3 ವರ್ಷಗಳು ಕಳೆದಿವೆ. 2 ನೇ ವಾದಿಗೆ ಇಬ್ಬರು ಮಕ್ಕಳಿರುತ್ತಾರೆ. 2 ನೇ ವಾದಿಯ ಹೆಂಡತಿ ಮತ್ತು ಮಕ್ಕಳನ್ನು ಈ ದಾವೆಯಲ್ಲಿ ಸೇರಿಸಿರುವುದಿಲ್ಲ. 2 ನೇ ವಾದಿಯು ನನಗೆ ಯಾವುದೇ ಮುಕ್ತಾರು ನಾಮೆಯನ್ನು ಬರೆದುಕೊಟ್ಟಿರುವುದಿಲ್ಲ. ದಾವಾ ಆಸ್ತಿಯಲ್ಲಿ 2 ನೇ ವಾದಿಯ ಹೆಂಡತಿ ಮತ್ತು ಮಕ್ಕಳಿಗೂ ಹಕ್ಕು ಇರುತ್ತದೆ.

ನಿಪಿ-1 ರಲ್ಲಿರುವ ಆಸ್ತಿಯ ಮೂಲ ಸರ್ವೆ ನಂ.122/2 ಎ 1 ಆಗಿರುತ್ತದೆ. 1958 ರಿಂದ ಸದರಿ ಆಸ್ತಿಯ ಪೋಡು ಆಗಿರುವುದಿಲ್ಲ. ಸದರಿ ಸರ್ವೆ ನಂ. 122/2 ಎ 1 ರ ಒಟ್ಟು ವಿಸ್ತೀರ್ಣ 3 ಎಕರೆ 20 ಗುಂಟೆ ಇರುತ್ತದೆ. ಸದರಿ ಸರ್ವೆ ನಂಬರ್ ನಲ್ಲಿ ನನ್ನ ತಂದೆಯವರಿಗೆ ಇಂದಿರಮ್ಮರವರು 1 ಎಕರೆ 20 ಗುಂಟೆಯನ್ನು ಬರೆದುಕೊಟ್ಟರು. ಸದರಿ ಸರ್ವೆ ನಂಬರ್ ನಲ್ಲಿ

ಉಳಿದ 2 ಎಕರೆ ಯಾರದ್ದು ಎಂಬ ಪ್ರಶ್ನೆಗೆ ಸಾಕ್ಷಿ ಉಳಿದ 2 ಎಕರೆಯನ್ನು ಅವರು ಬೇರೆ ಯಾರಿಗೋ ಬರೆದುಕೊಟ್ಟರು ಎಂದು ನುಡಿಯುತ್ತಾರೆ.

ನಿಪಿ-1 ನ್ನು ಒಂದು ಬಾರಿ ಓದಿ ತಿಳಿದುಕೊಂಡಿದ್ದೇನೆ. ನನ್ನ ತಂದೆ ಖರೀದಿಸಿದರು ಎಂದು ಹೇಳುವ ಜಮೀನಿನ ಖಾತೆ ಮತ್ತು ಪಹಣಿಯನ್ನು ನನ್ನ ತಂದೆಯವರು ತಮ್ಮ ಹೆಸರಿಗೆ ಮಾಡಿಸಿಕೊಳ್ಳಲಿಲ್ಲ. ದಾವಾ ಆಸ್ತಿಯ ಸ್ವಾಧೀನದಲ್ಲಿ ನೀವು ಇದ್ದೀರಿ ಎಂದು ತೋರಿಸಲು ಆರ್.ಆರ್ 5 ಮತ್ತು 6 ಅಥವಾ ಸರ್ವೆಯರ್ ರಿಪೋರ್ಟ್ ಅನ್ನು ಹಾಜರುಪಡಿಸಿರುವಿರಾ? ಎಂಬ ಪ್ರಶ್ನೆಗೆ ಸಾಕ್ಷಿ ನಮ್ಮ ಬಳಿ ಇರುವ ದಾಖಲೆಗಳೆಲ್ಲವನ್ನೂ ಹಾಜರುಪಡಿಸಿದ್ದೇವೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಗೆ ಸಂಬಂಧಪಟ್ಟಂತೆ ಕಂದಾಯವನ್ನು ಕಟ್ಟಿರುವಿರಾ? ಎಂಬ ಪ್ರಶ್ನೆಗೆ ಸಾಕ್ಷಿ 1 ಎಕರೆ ಬೇರೆಯವರ ಹೆಸರಿನಲ್ಲಿದೆ ಹಾಗೂ ನಮ್ಮ ಹೆಸರಿಗೆ ಖಾತೆಯು ಬಂದಿಲ್ಲದ ಕಾರಣ ಕಂದಾಯವನ್ನು ಕಟ್ಟಿಲ್ಲ ಎಂದು ನುಡಿಯುತ್ತಾರೆ. ಸದರಿ 1 ಎಕರೆಯ ಖಾತೆಯು ಅಣ್ಣಸ್ವಾಮಿಯ ಮಕ್ಕಳ ಹೆಸರಿನಲ್ಲಿದೆ. ಅಣ್ಣಸ್ವಾಮಿಯ ಮಕ್ಕಳು ಸದರಿ ಖಾತೆಯನ್ನು ತಮ್ಮ ಹೆಸರುಗಳಿಗೆ ಸುಮಾರು 10 ವರ್ಷಗಳ ಹಿಂದೆ ಮಾಡಿಸಿಕೊಂಡರು. ಅಣ್ಣಸ್ವಾಮಿಯ ಮಕ್ಕಳಿಗೆ ಯಾರು ದಾಖಲೆಯನ್ನು ನೋಂದಣಿ ಮಾಡಿಕೊಟ್ಟರು ಎಂಬ ಪ್ರಶ್ನೆಗೆ ಸಾಕ್ಷಿ ಅಣ್ಣಸ್ವಾಮಿಯ ಕಡೆಯಿಂದ ಅವರ ಮಗಳಿಗೆ ದಾಖಲೆಯಾಗಿರುತ್ತದೆ ಎಂದು ನುಡಿಯುತ್ತಾರೆ. ಸದರಿ ಅಣ್ಣಸ್ವಾಮಿಯ ಮಗಳ ಹೆಸರು ಪ್ರಮಿಳಾ ಆಗಿರುತ್ತದೆ. ಸದರಿ ಪ್ರಮಿಳಾರವರು ಈ ದಾವೆಯ 14 ನೇ ಪ್ರತಿವಾದಿಯಾಗಿರುತ್ತಾರೆ. ಸದರಿ 1 ಎಕರೆಯು 14 ನೇ ಪ್ರತಿವಾದಿಯ ಹೆಸರಿಗೆ ಹೇಗೆ ಬಂತು ಎಂದು ತೋರಿಸುವ ದಾಖಲೆಯನ್ನು ಪರಿಶೀಲನೆ ಮಾಡಿರುತ್ತೇನೆ. ಸಾಕ್ಷಿಯು ಮುಂದುವರೆದು ಸದರಿ ದಾಖಲೆಯನ್ನು ಈ ದಾವೆಯಲ್ಲಿ ಹಾಜರುಪಡಿಸಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ದಾಖಲೆಯು ಕ್ರಯ ಪತ್ರವಾಗಿರುತ್ತದೆ.

ದಾವಾ ಆಸ್ತಿಯನ್ನು ಕೊಂಡುಕೊಂಡಿದ್ದು ಅದರ ಖಾತೆಯನ್ನು ತಮ್ಮ ಹೆಸರಿಗೆ ಬದಲಾಯಿಸಿ ಎಂದು ನನ್ನ ತಂದೆಯವರು ತಾಲ್ಲೂಕು ಕಛೇರಿಯಲ್ಲಿ ಅರ್ಜಿಯನ್ನು ಸಲ್ಲಿಸಲಿಲ್ಲ. ಸಾಕ್ಷಿಯು ಮುಂದುವರೆದು ಸದರಿ ಜಮೀನಿನ ಖರೀದಿಯನ್ನು ನನ್ನ ತಂದೆ ತೀರಿಕೊಂಡ ನಂತರ ನನ್ನ ತಾಯಿಯವರು ನಮಗೆ ತಿಳಿಸಿದರು ಎಂದು ನುಡಿಯುತ್ತಾರೆ. ನನ್ನ ತಂದೆಯವರು ಸುಮಾರು 20 ವರ್ಷಗಳ ಹಿಂದೆ ತೀರಿಕೊಂಡರು. ನನ್ನ ತಂದೆ ತೀರಿಕೊಳ್ಳುವವರೆಗೆ ದಾವಾ ಆಸ್ತಿಯ ವಿಚಾರ ನಮಗೆ ಗೊತ್ತಿರಲಿಲ್ಲ ಮತ್ತು ಅದನ್ನು ನಾವು ನೋಡಿರಲಿಲ್ಲ. ಸಾಕ್ಷಿಯು ಮುಂದುವರೆದು ನಾವು ಅನುಭವದಲ್ಲಿದ್ದೆವು ಆದರೆ ದಾವಾ ಆಸ್ತಿಯನ್ನು ನೋಡಲಿಲ್ಲ ಎಂದು ನುಡಿಯುತ್ತಾರೆ. ನನ್ನ ತಂದೆ ತೀರಿಕೊಂಡ ನಂತರ ದಾವಾ ಆಸ್ತಿಯ ಖಾತೆ ಮತ್ತು ಪಹಣಿಯನ್ನು ನಮ್ಮ ಹೆಸರಿಗೆ ವರ್ಗಾಯಿಸಿ ಎಂದು ತಾಲ್ಲೂಕು ಕಛೇರಿಗೆ ನಾವು ಅರ್ಜಿಯನ್ನು ಸಲ್ಲಿಸಲಿಲ್ಲ. 14 ನೇ ಪ್ರತಿವಾದಿಯ ಹೆಸರಿಗೆ ಆಗಿರುವ ಖಾತೆ ಮತ್ತು ಪಹಣಿಯ ವಿರುದ್ಧ ನಾವು ಯಾವುದೇ

ಮೇಲ್ಮನವಿಯನ್ನು ಸಲ್ಲಿಸಿರುವುದಿಲ್ಲ. ದಾವಾ ಆಸ್ತಿಯ ಖಾತೆ ಮತ್ತು ಪಹಣಿಯು ಇಂದಿಗೂ 14 ನೇ ಪ್ರತಿವಾದಿಯ ಹೆಸರಿನಲ್ಲಿದೆ. ಸಾಕ್ಷಿಯು ಮುಂದುವರೆದು ದಾವಾ ಆಸ್ತಿಯ ಸ್ವಾಧೀನದಲ್ಲಿ ನಾವೇ ಇದ್ದೇವೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಯ ಖಾತೆ ಮತ್ತು ಪಹಣಿಯ ವಿರುದ್ಧ ಮೇಲ್ಮನವಿಯನ್ನು ಸಲ್ಲಿಸಲು ನಮಗೆ ತೊಂದರೆ ಇರಲಿಲ್ಲ. ಖಾತೆ ಮತ್ತು ಪಹಣಿಯ ಬಗ್ಗೆ 14 ನೇ ಪ್ರತಿವಾದಿಯನ್ನು ವಿಚಾರಿಸಿರುವಿರಾ? ಎಂಬ ಪ್ರಶ್ನೆಗೆ ಸಾಕ್ಷಿ ನನ್ನ ತಾಯಿಯವರು 14 ನೇ ಪ್ರತಿವಾದಿಯನ್ನು ವಿಚಾರಿಸಿದಾಗ ಅವರಿಗೆ 7 ಎಕರೆ ಪೈಕಿ ಜಮೀನನ್ನು ಬರೆದುಕೊಟ್ಟಿದ್ದು ನಮ್ಮ ಜಮೀನು ಎಲ್ಲಿದೆ ಎಂದು ತೋರಿಸಿಕೊಟ್ಟರೆ ನಿಮ್ಮ ಜಮೀನು ನಿಮಗೆ ಬರೆದುಕೊಡುತ್ತೇವೆ ಎಂದು 14 ನೇ ಪ್ರತಿವಾದಿಯು ನನ್ನ ತಾಯಿಗೆ ತಿಳಿಸಿದರು ಎಂದು ನುಡಿಯುತ್ತಾರೆ.

1958 ರಲ್ಲಿ ಕ್ರಯ ಪತ್ರವನ್ನು ಇಂದಿರಮ್ಮ ಕೋಂ ತಿಮ್ಮಪ್ಪರವರು ಬರೆದುಕೊಟ್ಟರು. ಆ ಸಮಯದಲ್ಲಿ ಖಾತೆ ಮತ್ತು ಪಹಣಿಯು ಇಂದಿರಮ್ಮರವರ ಹೆಸರಿನಲ್ಲಿ ಇತ್ತೋ ಇಲ್ಲವೋ ನನಗೆ ಗೊತ್ತಿಲ್ಲ. ಸದರಿ ಇಂದಿರಮ್ಮರವರನ್ನು ನಾನು ನೋಡಿರುವುದಿಲ್ಲ. ಸದರಿ ಇಂದಿರಮ್ಮರವರಿಗೆ ಮಕ್ಕಳಿದ್ದರು. ಸದರಿ ಇಂದಿರಮ್ಮನ ಮಕ್ಕಳ ಹೆಸರು ಗೊತ್ತೆ? ಎಂಬ ಪ್ರಶ್ನೆಗೆ ಸಾಕ್ಷಿ ಒಬ್ಬರ ಹೆಸರು ಧರ್ಮಪಾಲಯ್ಯ ಆಗಿರುತ್ತದೆ ಮತ್ತು ಇತರರ ಹೆಸರು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಈ ಹಂತದಲ್ಲಿ ಸಾಕ್ಷಿಗೆ ನಿಪಿ-1 ರ ಕ್ರಯ ಪತ್ರದ ದೃಢೀಕೃತ ನಕಲನ್ನು ತೋರಿಸಲಾಯಿತು ಹಾಗೂ ಸಾಕ್ಷಿಯು ನಿಪಿ-1 ನ್ನು ಓದಿ ಅದರಲ್ಲಿ ಖಾತೆಯು ಮಲ್ಲಯ್ಯ ಬಿನ್ ಮಲ್ಲಯ್ಯ ಎಂಬುವವರ ಹೆಸರಿನಲ್ಲಿತ್ತು ಎಂದು ಬರೆದಿದೆ ಎಂದು ಗುರುತಿಸಿರುತ್ತಾರೆ. ನಿಪಿ-1 ರಲ್ಲಿ 'ಚಿಕ್ಕಆಂಜಿನಪ್ಪರವರ ಹೆಸರಿನಲ್ಲಿ ಇರುವ ಖಾತೆ' ಎಂದೂ ಸಹ ಬರೆದಿದೆ ಎಂದರೆ ಸಾಕ್ಷಿ ನನಗೆ ಗೊತ್ತಾಗುತ್ತಿಲ್ಲ ಎಂದು ನುಡಿಯುತ್ತಾರೆ. ನಿಪಿ-1 ನ್ನು ಓದಿಲ್ಲವೇ? ಎಂಬ ಪ್ರಶ್ನೆಗೆ ಸಾಕ್ಷಿ ಅದರಲ್ಲಿ ಬರೆದಿರುವುದು ನನಗೆ ಅರ್ಥವಾಗುತ್ತಿಲ್ಲ ಎಂದು ನುಡಿಯುತ್ತಾರೆ. ನಿಪಿ-1 ನ್ನು ಹಾಜರುಪಡಿಸುವ ಮುನ್ನ ಅದರ ವಿಚಾರಗಳನ್ನು ಕೇಳಿ ತಿಳಿದುಕೊಂಡಿದ್ದೆನು. ಸದರಿ ಚಿಕ್ಕಆಂಜಿನಪ್ಪ ಮತ್ತು ಮಲ್ಲಯ್ಯ ಬಿನ್ ಮಲ್ಲಯ್ಯರವರು ಯಾರೆಂಬುದು ನನಗೆ ಗೊತ್ತಿಲ್ಲ.

ದಾವಾ ಆಸ್ತಿಯ ಚೆಕ್ಕುಬಂದಿಯನ್ನು ನಿಪಿ-1 ರ ಕ್ರಯ ಪತ್ರದಂತೆ ದಾವೆಯಲ್ಲಿ ತೋರಿಸಿರುತ್ತೇವೆ. ನಿಪಿ-1 ರಲ್ಲಿ ಇರುವ ಜಮೀನಿನ ಚೆಕ್ಕುಬಂದಿ ಪೂ-ರಸ್ತೆ, ಪ-ನಲ್ಲಗೆದರಪ್ಪರವರ ಜಮೀನು, ಉ-ಶ್ಯಾನುಭೋಗ ಪದ್ಮನಾಭಯ್ಯರವರ ಜಮೀನು ಹಾಗೂ ದ-ಇದೇ ನಂಬರ್ ಪೈಕಿ ಎಳೆಚೌಡಪ್ಪರವರ ಜಮೀನು ಎಂದು ನಿಪಿ-1 ರಲ್ಲಿ ತೋರಿಸಲಾಗಿದೆ. ಎಳೆಚೌಡಪ್ಪರವರೊಂದಿಗೆ ನಾನು ವಿಶ್ವಾಸದಿಂದ ಇದ್ದೇನೆ. ವಾದ ಪತ್ರದ ಷೆಡ್ಯೂಲ್ ನಲ್ಲಿ ದಾವಾ ಆಸ್ತಿಯ ಪೂ-ರಸ್ತೆ ಮತ್ತು ತಿಮ್ಮಯ್ಯನ ಉಳಿಕೆ ಜಮೀನು ಎಂದು ತೋರಿಸಿದ್ದು ಸದರಿ ಜಮೀನು ಸರ್ವೆ ನಂ. 122/2 ಎ 1 ರ 7 ಎಕರೆ ಕೆಲವು ಗುಂಟೆಗಳ ಪೈಕಿ ಉಳಿಕೆ ಜಮೀನು ಆಗಿರುತ್ತದೆ. ಸದರಿ ತಿಮ್ಮಯ್ಯ ಯಾರು

ಎಂಬುದು ನನಗೆ ಗೊತ್ತಿಲ್ಲ. ದಾವಾ ಆಸ್ತಿಯ ಪೂರ್ವಕ್ಕೆ ಇರುವ ರಸ್ತೆಯಿಂದ ಆಚೆಗೆ ಇರುವ ಜಮೀನಿನಲ್ಲಿ ಯಾರಿದ್ದಾರೆ ಎಂಬುದು ನನಗೆ ಗೊತ್ತಿಲ್ಲ. ದಾವಾ ಆಸ್ತಿಯ ಪಶ್ಚಿಮಕ್ಕೆ ಇದ್ದಾರೆ ಎಂದು ಹೇಳಿರುವ ನಲ್ಲಕದೀರಪ್ಪರವರನ್ನು ನಾನು ನೋಡಿರುವುದಿಲ್ಲ. ಸದರಿ ನಲ್ಲಕದೀರಪ್ಪರವರ ಮಕ್ಕಳ ವಿಚಾರಗಳು ನನಗೆ ಗೊತ್ತಿಲ್ಲ. ದಾವಾ ಆಸ್ತಿಯ ಉತ್ತರ ದಿಕ್ಕಿಗೆ ಇದ್ದಾರೆ ಎಂದು ಹೇಳುವ ಪದ್ಮನಾಭಯ್ಯರವರನ್ನು ನಾನು ನೋಡಿರುವುದಿಲ್ಲ. ಸಾಕ್ಷಿಯು ಮುಂದುವರೆದು ಈಗ ಎಲ್ಲವು ಬದಲಾಗಿದೆ ಎಂದು ನುಡಿಯುತ್ತಾರೆ. ಈ ದಾವೆಯನ್ನು ಹೂಡಿದಾಗ ದಾವಾ ಆಸ್ತಿಯ ಚೆಕ್ಕುಬಂದಿಯನ್ನು ನಿಪಿ-1 ರಂತೆ ವಾದ ಪತ್ರದ ಷೆಡ್ಯೂಲ್ ನಲ್ಲಿ ತೋರಿಸಿರುತ್ತೇವೆ ಆದರೆ ದಾವಾ ಆಸ್ತಿಯ ಪ್ರಸ್ತುತ ಚೆಕ್ಕುಬಂದಿಯನ್ನು ವಾದ ಪತ್ರದಲ್ಲಿ ತೋರಿಸಿರುವುದಿಲ್ಲ ಎಂದರೆ ಸರಿ.

ನ್ಯಾಯಾಲಯದ ಮುಂದೆ ಇರುವ 1 ನೇ ಪ್ರತಿವಾದಿಯನ್ನು ಸುಮಾರು 20 ವರ್ಷಗಳ ಹಿಂದೆ ನೋಡಿದ್ದೇನೆ. 1 ನೇ ಪ್ರತಿವಾದಿಯು ನಮ್ಮ ಮೇಲೆ ಗಲಾಟೆಗೆ ಎಂದಿಗೂ ಬಂದಿರುವುದಿಲ್ಲ. 1 ನೇ ಪ್ರತಿವಾದಿಯು ದಾವಾ ಆಸ್ತಿಯನ್ನು ಅವರ ಹೆಸರಿಗೆ ಬರೆಸಿಕೊಂಡಿರುವುದಿಲ್ಲ. ದಾವಾ ಆಸ್ತಿಯನ್ನು 1 ನೇ ಪ್ರತಿವಾದಿಯು ಯಾರಿಗೂ ಬರೆದುಕೊಟ್ಟಿರುವುದಿಲ್ಲ. ದಾವಾ ಆಸ್ತಿಯಲ್ಲಿ 1 ನೇ ಪ್ರತಿವಾದಿಯು ಸ್ವಾಧೀನದಲ್ಲಿರುವುದಿಲ್ಲ. 14 ನೇ ಪ್ರತಿವಾದಿಯ ಹೆಸರಿಗೆ ಆಯಿತು ಎಂದು ಹೇಳುವ ದಾಖಲೆಗೆ ಸಾಕ್ಷಿಯಾಗಿ 1 ನೇ ಪ್ರತಿವಾದಿಯು ಸಹಿ ಮಾಡಿರುವುದಿಲ್ಲ. 1 ನೇ ಪ್ರತಿವಾದಿಯು ಗೌರಿಬಿದನೂರು ನಗರದಲ್ಲಿ ವಾಸವಿದ್ದಾರೆ. 1 ನೇ ಪ್ರತಿವಾದಿಯು ಗೌರಿಬಿದನೂರು ನಗರಕ್ಕೆ ಬಂದು ಸುಮಾರು 20 ವರ್ಷಗಳು ಕಳೆದಿವೆ. 1 ನೇ ಪ್ರತಿವಾದಿಯು ವಾಸವಿರುವ ಮನೆಯಿಂದ ದಾವಾ ಆಸ್ತಿಯು 10 ಕಿ.ಮೀ ದೂರದಲ್ಲಿದೆ.

ಸರ್ವೆ ನಂ. 122/2 ಬಿ ರ ಜಮೀನಿಗೂ ನಿಮಗೂ ಸಂಬಂಧವಿದೆಯೇ ಎಂಬ ಪ್ರಶ್ನೆಗೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ.ಸ. ಇದೆ

ಸಹಿ/-

ಪ್ರ.ಸಿ.ನ್ಯಾ ಮತ್ತು ಜೆಎಂಎಫ್‌ಸಿ,

ಗೌರಿಬಿದನೂರು